(SRI J. MOHAMED IMAM)

construct a bridge across Gadimakunte Halla in Jagalur taluk;

(*b*) whether an estimate was ordered to be prepared;

(*c*) whether the estimate is ready and if so whether they will sanction it soon?

*A*.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Yes.

(*c*) Yes. Will be considered as soon as the estimate is received.

ಶ್ರೀ ಜೆ. ಮಹಮ್ಮದ್ ಇಮಾಂ.—ಈ ಸೇತುವೆಯನ್ನು ಕಟ್ಟಿಸಿಕೊಡಬೇಕೆಂದು ತಮಗೆ ಅರಿಕೆಮಾಡಿಕೊಂಡು ಇಲ್ಲಿಗೆ ಎಷ್ಟು ದಿವಸಗಳಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ದಿವಸಗಳಾಯಿತು ಎನ್ನುವುದು ನನಗೆ ನೆನಪಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಇಲ್ಲಿಗೆ ಮೂರು ವರ್ಷಗಳ ಮೇಲಾಗಿದೆ ಎಂದು ಹೇಳಿದರೆ ತಾವು ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಮೂರು ವರ್ಷಗಳಾಗಿರಲಾರದು. ನಾನೂ ಮತ್ತು ತಾವೂ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸವಾಡುತ್ತಿದ್ದ ಕಾಲದಲ್ಲಿ ತಾವು ಈ ವಿಚಾರವನ್ನು ನನ್ನಲ್ಲಿ ತಿಳಿಸಿದ್ದಹಾಗೆ ನೆನಪಿದೆ. ಆಮೇಲೆ ಈಗಾಗಲೇ ಈ ಸೇತುವೆಯ ಅಂದಾಜು ತಯಾರಾಗಿ ಸೂಪರಿಟೆಂಡೆಂಟರವರ ಕಛೇರಿಯಲ್ಲಿ ಸ್ಕ್ರುಟಿನಿಯಾಗುತ್ತಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಈಗ ಆ ಪ್ರದೇಶದಲ್ಲಿ ಈ ರಸ್ತೆ ಇಲ್ಲದ ಜನ ಮತ್ತು ಜಾನುವಾರುಗಳಿಗೆ ಸಂಚಾರಕ್ಕೆ ಬಹಳ ತೊಂದರೆಯಾಗಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರವಾಹವಿರುವಾಗ ವಾಹನ ಸಂಚಾರ ಇತ್ಯಾದಿಗಳಿಗೆ ತೊಂದರೆ ಇದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಪ್ರವಾಹವಿಲ್ಲದ ಕಾಲದಲ್ಲಿಯೂ ಸಹ ಅಲ್ಲಿ ವಿಶೇಷವಾಗಿ ಮರಳು ಬಂದು ಬಿದ್ದಿರುವುದರಿಂದ ಸಂಚಾರ ಸೌಕರ್ಯಕ್ಕೆ ಬಹಳ ಕಷ್ಟವಾಗಿದೆ ಎನ್ನುವುದು ತಮಗೆ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲಿ. ಆ ಕಾರ್ಯವನ್ನು ಆದಷ್ಟು ಜಾಗ್ರತೆಮಾಡಿಸಿಕೊಡಲಾಗುತ್ತದೆ.

ಶ್ರೀ ಜೆ. ಮಹಮದ್ ಇಮಾಂ.—ಆ ಅಂದಾಜನ್ನು ಜಾಗ್ರತೆ ತರಿಸಿಕೊಂಡು ಮಂಜೂರುಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುತ್ತೇವೆ.

---

## Misappropriation in Co-operative Societies.

*Q*.—11. **Sri B. N. BORANNA GOWDA** (Belur).—

Will the Government be pleased to state:—

(*a*) the number of Co-operative Societies and the Multi-purpose Co-operative Societies where the money has been appropriated by the Secretary or the President since last one year;

(*b*) (i) the number of cases where the recovery has been effected; (ii) the total amount recovered;

(*c*) (i) the number of cases where prosecutions have been withdrawn; (ii) the reason for their withdrawal?

*A*.—**Dr. R. NAGAN GOWDA** (Minister for Agriculture).—

(*a*) 1. Ordinary Co-operative Societies. 4

2. Multi-purpose Co-operative Societies. 7

Total 11

(*b*) (i) 6 (six cases).

(ii) Rs. 8,914-2-0 *plus* Rs. 1,000 recovered in part from the Nagamangala Co-operative Bank.

(*c*) (i) Nil.

(ii) Does not arise in view of reply to (c) (i).

ಶ್ರೀ ಬಿ. ಎಚ್. ಬೋರಣ್ಣಗೌಡ.—ತಾವು (ಎ) ಪ್ರಶ್ನೆಗೆ ಉತ್ತರವಾಗಿ ಒದಗಿಸಿರುವ ಅಂಶಗಳನ್ನು ಯಾವ ಆಧಾರದ ಮೇಲೆ ಹೇಳಿರುತ್ತೀರಿ?

ಡಾ॥ ಆರ್. ನಾಗನಗೌಡ.—ಆಡಿಟ್ ವರದಿಯ ಆಧಾರದ ಮೇಲೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಗಿದ್ದರೆ ತಾವು ಎಲ್ಲ ಸೊಸೈಟಿಗಳ ಲೆಕ್ಕಪತ್ರಗಳನ್ನೂ ಆಡಿಟ್ ಮಾಡಿಸಿದ್ದಿರಾ?

ಡಾ॥ ಆರ್. ನಾಗನಗೌಡ.—ಆಡಿಟ್ ಮಾಡಿಸುತ್ತಿದ್ದೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಗಾದರೆ ಈಗ ಆಡಿಟ್‌ಮಾಡಿಸದೆ ಇರುವ ಸೊಸೈಟಿಗಳು ಯಾವವೂ ಇಲ್ಲ ಎಂದು ಹೇಳುತ್ತೀರಾ?

ಡಾ॥ ಆರ್. ನಾಗನಗೌಡ.—ಎಲ್ಲ ಸೊಸೈಟಿಗಳ ಲೆಕ್ಕ ಪತ್ರಗಳೂ ಆಡಿಟ್‌ಆಗಿದೆ ಎಂದು ತಿಳಿಸಲು ಅದಕ್ಕೆ ಸಂಬಂಧಪಟ್ಟ ಖಚಿತವಾದ ಅಂಕಿಅಂಶಗಳು ಈಗ ನಮ್ಮಲ್ಲಿಲ್ಲ. ಆದರೆ ನಾವು ಇತ್ತೀಚೆಗೆ ಹೊಸ ಆಡಿಟ್ ಸಿಬ್ಬಂದಿಯನ್ನಿಟ್ಟುಕೊಂಡು ಲೆಕ್ಕಗಳನ್ನು ಆಡಿಟ್ ಮಾಡಿಸುತ್ತಿದ್ದೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈಗ ತಾವು ನೇಮಿಸಿಕೊಂಡಿರುವ ಆ ಹೊಸ ಸಿಬ್ಬಂದಿ ಎಲ್ಲ ಸೊಸೈಟಿಗಳ ಲೆಕ್ಕಪತ್ರಗಳನ್ನೂ ಆಡಿಟ್‌ಮಾಡಿ ಮುಗಿಸಲು ಎಷ್ಟು ಕಾಲಬೇಕಾಗಬಹುದೆಂದು ನಿರೀಕ್ಷಣೆಮಾಡಿದ್ದೀರಿ?

ಡಾ॥ ಆರ್. ನಾಗನಗೌಡ.—ಪ್ರತಿ ವರ್ಷವೂ ಲೆಕ್ಕ ಪತ್ರಗಳನ್ನು ಆಡಿಟ್‌ಮಾಡಿಸಬೇಕೆಂಬುದು ನಮ್ಮ ಉದ್ದೇಶ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಸನ ಜಿಲ್ಲೆಯಲ್ಲಿ 10-15 ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ ಎನ್ನುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ಮತ್ತೊಂದು ಪ್ರಶ್ನೆ ಬಂದಿದೆ. ಆಗ ಇದರ ಚರ್ಚೆ ನಡೆಸಬಹುದು.

---

## Multi-purpose Co-operative Societies.

*Q.*—477. **Sri K. PANCHAKSHARIAH** (Arsikere).—

Will the Government be pleased to state:—

(*a*) the number of Multi-purpose Co-operative Societies that were started in Hassan district;

(*b*) the number working at present;

(*c*) the number of Co-operative Societies started newly during 1954-55; and the amount of share capital collected for these;

(*d*) the number of Societies which are not working now;

(*e*) the number of Societies inspected by (i) the Assistant Registrar; and (ii) the number audited?

*A.*—**Dr. R. NAGAN GOWDA** (Minister for Agriculture).—

(*a*) 85 (Eighty-five).

(*b*) 63 (Sixty-three).

(*c*) 51 Societies were organised during 1954-55, of which 37 were Rural Industrial Societies. The share capital collected by the Rural Industrial Co-operative Societies is Rs. 1,26,748 and that collected by the other Co-operative Societies is Rs. 8,200.

(*d*) 63 (Sixty-three).

(*e*) (i) 113 (One hundred and thirteen).

(ii) 331 (Three hundred and thirty-one).

ಶ್ರೀ ಕೆ. ಪಂಚಾಕ್ಷರಯ್ಯ.—ಈ ಆಡಿಟ್ ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ತಿಂಗಳಿನಲ್ಲಿ ನಡೆದಿದೆ ಎನ್ನುವುದನ್ನು ತಿಳಿಸುವುದಕ್ಕೆ ಆಗುತ್ತದೆಯೇ?

**Dr. R. NAGAN GOWDA.**—Please repeat your question.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆ ತಾಲ್ಲೂಕಿನಲ್ಲಿ ಎಷ್ಟು ಸೊಸೈಟಿಗಳ ಆಡಿಟ್ ಕೆಲಸ ನಡೆದಿದೆ?

ಡಾ॥ ಆರ್. ನಾಗನಗೌಡ.—331 ಸೊಸೈಟಿಗಳೆಂದು ಗೊತ್ತಾಗಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆ ತಾಲ್ಲೂಕಿನಲ್ಲಿ ನಾನು ಕೇಳುತ್ತಿರುವುದು.

ಡಾ॥ ಆರ್. ನಾಗನಗೌಡ.—ಹಾಸನ ಜಿಲ್ಲೆಯಲ್ಲಿ 331 ಸೊಸೈಟಿಗಳ ಲೆಕ್ಕಗಳು ಆಡಿಟ್ ಆಗಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈಗ ತಾವು (ಇ) (i)ಗೆ ಒದಗಿಸಿರುವ ಉತ್ತರದಲ್ಲಿ 113 ಎಂದು ತಿಳಿಸಿದ್ದೀರಿ. ಇದರಲ್ಲಿ ಎಲ್ಲ ವಿಧವಾದ ಸೊಸೈಟಿಗಳೂ ಸೇರಿವೆಯೇ?

ಡಾ॥ ಆರ್. ನಾಗನಗೌಡ.—ಈ ಪೈಕಿ 63 ಸೊಸೈಟಿಗಳು ಮಾತ್ರ ಕೆಲಸಮಾಡುತ್ತಿಲ್ಲ. ಅವುಗಳಲ್ಲಿ 22 ಸೊಸೈಟಿಗಳು (ಎ) ಕ್ಲಾಸಿಗೆ ಅಂದರೆ, ಮಲ್ಟಿಪರ್ಪಸ್ ಸೊಸೈಟಿಗಳು ಸೇರಿವೆ. ಇನ್ನುಳಿದ 41 ಸೊಸೈಟಿಗಳು ಅರ್ಬನ್‌ರಿ ಸೊಸೈಟಿಗಳು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಸನ ಜಿಲ್ಲೆಗೆ ಸಂಬಂಧಪಟ್ಟಂತೆ 331 ಸೊಸೈಟಿಗಳೆಂದು ಹೇಳಿದ್ದೀರಿ. ಅಷ್ಟು ಸೊಸೈಟಿಗಳಿವೆಯೇ?

**Dr. R. NAGAN GOWDA.**—I take it it refers to Hassan.

ಶ್ರೀ ಎ. ವಿ ನರಸಿಂಹರೆಡ್ಡಿ.—ಹಾಗಾದರೆ ಇದೀ ಸಂಸ್ಥಾನದಲ್ಲಿ ಒಟ್ಟೆಷ್ಟು ಸೊಸೈಟಿಗಳಿವೆ?

ಡಾ॥ ಆರ್. ನಾಗನಗೌಡ.—5 ಸಾವಿರಕ್ಕೆ ಮೇಲ್ಪಟ್ಟಿವೆ.

**Mr. SPEAKER.**—That question does not arise.

ಶ್ರೀ ಬಿ. ಚಿಕ್ಕಣ್ಣ.—ಎಷ್ಟು ವರ್ಷಕ್ಕೊಮ್ಮೆ ಈ ಸೊಸೈಟಿಗಳ ಆಡಳಿತವರ್ಗ ಹೊಸದಾಗಿ ರಚನೆಯಾಗಬೇಕೆಂದು ಕಾನೂನಿದೆ?

ಡಾ॥ ಆರ್. ನಾಗನಗೌಡ.—ಪ್ರತಿ ವರ್ಷವೂ ಬದಲಾವಣೆಯಾಗಬೇಕು. ಪ್ರತಿ ವರ್ಷವೂ ಜನರಲ್ ಬಾಡಿ ಮೀಟಿಂಗ್ ನಡೆಯಬೇಕು ಎಂಬ ನೇಮಕವಿದೆ.

ಶ್ರೀ ಬಿ. ಚಿಕ್ಕಣ್ಣ.—ಎರಡು ಮೂರು ವರ್ಷಗಳಾದರೂ ಕೂಡ ಈ ಕಮಿಟಿಗಳು ಚುನಾವಣೆಯಾಗದೆ ಇರಬಹುದು ಎಂಬುದು ತಮ್ಮ ಅಭಿಪ್ರಾಯವೇ?

ಡಾ॥ ಆರ್. ನಾಗನಗೌಡ.—ಇಲ್ಲ. ಸಾಧಾರಣವಾಗಿ ಒಂದೇ ವರ್ಷದಲ್ಲಿ ಚುನಾವಣೆ ಆಗುತ್ತದೆ.

ಶ್ರೀ ಬಿ. ಚಿಕ್ಕಣ್ಣ.—ಈಗ ಎರಡು ಮೂರು ವರ್ಷಗಳಿಂದಲೂ ಹೊಸದಾಗಿ ಚುನಾವಣೆ ಆಗದೆ ಹಿಂದಿನ ಕಮಿಟಿಗಳೇ ನಡೆಸಿಕೊಂಡು ಬರುತ್ತಿವೆ. ಆ ವಿಚಾರದಲ್ಲಿ ತಮ್ಮ ಅಭಿಪ್ರಾಯವೇನು?

ಡಾ॥ ಆರ್. ನಾಗನಗೌಡ.—ಸಾಧಾರಣವಾಗಿ ಬೈಲಾಗಳಲ್ಲಿ ಒಂದು ವರ್ಷಕ್ಕೆ ಚುನಾವಣೆಯಾಗಬೇಕು ಎಂದು ಇದೆ. ಅಂತಹ ಸೊಸೈಟಿಗಳು ಯಾವುದಾದರೂ ಇದ್ದರೆ ಅವುಗಳನ್ನು ನನ್ನ ಗಮನಕ್ಕೆ ತಂದರೆ ನಾನು ವಿಚಾರಿಸುತ್ತೇನೆ.

ಶ್ರೀ ಬಿ. ಚಿಕ್ಕಣ್ಣ.—ಅರಸೀಕೆರೆ ತಾಲ್ಲೂಕು ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿ ಮೂರು ವರ್ಷಗಳಿಂದಲೂ ಕೂಡ ಹೊಸದಾಗಿ ರಚನೆಯಾಗದೆ ಹಾಗೆಯೇ ಉಳಿದಿದೆ. ಅದಕ್ಕೆ ತಾವೇನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

ಶ್ರೀ ವಿ. ವೆಂಕಟಪ್ಪ.—ಈಗ (*b*) ಉತ್ತರವಾಗಿ ಸಹಕಾರ ಸಂಘಗಳು ಕೆಲಸಮಾಡುತ್ತಿರುವುದು 63 ಎಂದು ಕೊಟ್ಟಿದ್ದೀರಿ ಮತ್ತು (*d*) ಉತ್ತರವಾಗಿ ಕೆಲಸ ನಡೆಯುಸದೇ ಇರುವ ಸಂಘಗಳೂ ಸಹ 63 ಎಂದು ಕೊಟ್ಟಿದ್ದೀರಿ. ಇದರಿಂದ ಯಾವ ಸೊಸೈಟಿಯೂ ಕೆಲಸ ಮಾಡುತ್ತಿಲ್ಲ ಎಂದು ಅರ್ಥವೋ?

**Dr. R. NAGAN GOWDA.**—It is merely an accident. The figure is merely a coincidence.

ಶ್ರೀ ವಿ. ವೆಂಕಟಪ್ಪ.—ಯಾವ ಸೊಸೈಟಿಗಳೂ ಕೆಲಸಮಾಡುತ್ತಾ ಇಲ್ಲ ಎಂದು ಅರ್ಥವೋ?

**Mr. SPEAKER.**—What is the implication of that answer? Are they closed? That is what the member is asking.